‘ಆಚಾರಧರ್ಮ’ ಗ್ರಂಥಮಾಲಿಕೆ : ಖಂಡ ೧

# ಆಚಾರಧರ್ಮದ ಪ್ರಾಸ್ತಾವಿಕ

(Introduction to Achardharma) ಕನ್ನಡ (Kannada)


**ಸಂಕಲನಕಾರರು**

ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೧೧’ ರಲ್ಲಿ ಓದಿ.)

**ಸೂಕ್ಷ್ಮಜ್ಞಾನ ಪಡೆದವರು**

ಶ್ರೀ. ನಿಷಾದ ಶ್ಯಾಮ ದೇಶಮುಖ ಮತ್ತು ಇತರರು





**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಎ–ಅಂಚೆ : granth@sanatan.org

**ಮುಖಪುಟ ಪರಿಕಲ್ಪನೆ** : ಶ್ರೀ. ಗುರುದಾಸ ಖಂಡೇಪಾರಕರ ಮತ್ತು
ಸೌ. ಜಾಹ್ನವಿ ಶಿಂದೆ

**First Edition** : Jeejamata Jayanthi, Kaliyug Varsh 5111
(31st December 2009)

**Second Edition** : Yugadi, Kaliyug Varsh 5123
(13th April 2021)

**Third Reprint** : Navaratrarambha, Kaliyug Varsh 5124
(26th September 2022)

Translated from the original Marathi text ‘Achardharmache Prastavik’
ಪ್ರಸ್ತುತ ಗ್ರಂಥವು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಶ್ರೀಮತಿ ಅಶ್ವಿನಿ ಪ್ರಭು ಮತ್ತು
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 85/-

**ISBN** : 978-81-949233-4-3

ॐ ಗ್ರಂಥ ಕ್ರ. : 125

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ


೧. ಗ್ರಂಥದ ಸಂಕಲನಕಾರರ ಪರಿಚಯ ೬

೨. 'ಆಚಾರಧರ್ಮ'ದ ಗ್ರಂಥಗಳನ್ನು ಸಂಕಲನ ಮಾಡುವುದರ ಹಿಂದಿನ ಉದ್ದೇಶ ೮

೩. 'ಆಚಾರಧರ್ಮ' ಗ್ರಂಥಮಾಲಿಕೆಯ ಮನೋಗತ ೯

೪. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೧೨

೫. ಪ್ರಸ್ತುತ ಗ್ರಂಥದ ಮನೋಗತ ೧೬


---

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ಆಚರಣೆ, ಆಚಾರ ಮತ್ತು ಆಚಾರಧರ್ಮ ಇವುಗಳ ಅರ್ಥ ೧೭

೨. ಆಚಾರಧರ್ಮದ ನಿರ್ಮಿತಿ ೧೯

೩. ಯುಗಗಳಿಗನುಸಾರ ಆಚಾರಧರ್ಮದ ಸ್ವರೂಪ ೧೯

೪. ಕಾಲಕ್ಕನುಸಾರ ಬದಲಾಗುತ್ತಿರುವ ಆಚಾರಗಳ ಸ್ವರೂಪ ೨೦

೫. ಆಚಾರಧರ್ಮ ಮತ್ತು ಬುದ್ಧಿವಾದ ೨೧

೬. ಆಚಾರಗಳ ಮಹತ್ವ ೨೩

* ಆಚಾರವೇ ಧರ್ಮದ ಅಡಿಪಾಯವಾಗಿದೆ ! ೨೩
* ಆಚಾರಧರ್ಮವೆಂದರೆ ಧರ್ಮದ ಅಪೇಕ್ಷೆಯಿಂದ ಮಾಡಿದ ಅರ್ಥ ಮತ್ತು ಕಾಮಗಳ ವಿನಿಯೋಗ ೨೫
* ಆಚಾರವು ಸಾಧನೆಯ ಬೀಜರೂಪದಲ್ಲಿನ ಅಡಿಪಾಯವಾಗಿದೆ ೨೬
* ವರದಾನ ಪ್ರಾಪ್ತವಾದ ಅಸುರರು ಆಚಾರಧರ್ಮವನ್ನು ಪಾಲಿಸುವ ವರೆಗೆ ದೇವತೆಗಳಿಗೆ ಅಜೇಯರಾಗಿರುತ್ತಾರೆ ಮತ್ತು ಅವರ ನಾಶವು ಆಚಾರಧರ್ಮವನ್ನು ತ್ಯಜಿಸಿದ ಮೇಲೆಯೇ ಸಾಧ್ಯವಾಗುತ್ತದೆ ೨೬

೭. ಆಚಾರಧರ್ಮವನ್ನು ಪಾಲಿಸುವುದರಿಂದಾಗುವ ಲಾಭಗಳು : ವ್ಯಷ್ಟಿ, ಸಮಷ್ಟಿ ಮತ್ತು ವ್ಯಷ್ಟಿ ಮತ್ತು ಸಮಷ್ಟಿ ಇವುಗಳ ಸಂದರ್ಭದಲ್ಲಾಗುವ ಲಾಭಗಳು ೨೯

೮. ಆಚಾರಧರ್ಮವನ್ನು ಪಾಲಿಸದಿದ್ದರೆ ಆಗುವ ಹಾನಿಗಳು ೩೯

೯. ಆಚಾರಗಳ ವಿಧಗಳು ೪೦

೧೦. ವಿವಿಧ ಸ್ವರೂಪದ ಆಚಾರಗಳು ೪೧

**೧೧. ಆಚಾರಗಳನ್ನು ಹೇಗೆ ಪಾಲಿಸಬೇಕು ?** ೪೩

೧೧ ಅ. 'ಮೃತ್ಯುವು ನನ್ನ ಕೂದಲುಗಳನ್ನು ಹಿಡಿದುಕೊಂಡಿದೆ' ಎಂದು ತಿಳಿದುಕೊಂಡು ಧರ್ಮಾಚರಣೆಯನ್ನು ಮಾಡಬೇಕು ೪೩

೧೧ ಆ. ನಿತ್ಯನೈಮಿತ್ತಿಕ ಕರ್ಮಗಳನ್ನು ಕರ್ತವ್ಯಬುದ್ಧಿಯಿಂದ ಮತ್ತು ಅನಾಸಕ್ತಿಯಿಂದ ಆಮರಣ ಆಚರಿಸುವುದು ಅವಶ್ಯಕವಾಗಿದೆ ೪೩

೧೧ ಇ. ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವುದರಿಂದಾಗುವ ಆಚರಣ ಶುದ್ಧಿಯ ಲಾಭವು ಸರ್ವಶ್ರೇಷ್ಠವಾಗಿದೆ ೪೩

**೧೨. ಆಚಾರಧರ್ಮವನ್ನು ಒಳ್ಳೆಯ ರೀತಿಯಿಂದ ಆಚರಿಸಲು ಅವಶ್ಯಕವಿರುವ ಘಟಕಗಳು** ೪೪

**೧೩. ಆಚಾರಧರ್ಮದ ಯಥಾಯೋಗ್ಯ ಪಾಲನೆಯಾಗುತ್ತಿರುವುದರ ಲಕ್ಷಣ – ದೇಶದಲ್ಲಿ ಕೃಷ್ಣಮೃಗಗಳು ನಿರಾತಂಕವಾಗಿ ಸಂಚರಿಸುವುದು** ೪೫

**೧೪. ಆಚಾರಧರ್ಮ ಮತ್ತು ಇತರ ಸಾಧನೆಗಳ ತುಲನೆ** ೪೬

**೧೫. ಉನ್ನತರಿಗೆ ಆಚಾರಧರ್ಮವನ್ನು ಪಾಲಿಸುವ ಅವಶ್ಯಕತೆಯಿರುವುದಿಲ್ಲ** ೪೬

**'ಆಚಾರಧರ್ಮದ ಪ್ರಾಸ್ತಾವಿಕ'ದ ಬಗ್ಗೆ ಆಳವಾದ ಜ್ಞಾನ**

**೧. 'ಆಚಾರಧರ್ಮ' ಶಬ್ದದ ವ್ಯಾಖ್ಯೆ** ೫೦

**೨. ಆಚಾರಧರ್ಮದ ಉತ್ಪತ್ತಿ** ೫೦

**೩. ಆಚಾರಧರ್ಮದ ಮಹತ್ವ** ೫೩

**೪. ಆಧ್ಯಾತ್ಮಿಕ ಮಟ್ಟಕ್ಕನುಸಾರ ಧರ್ಮದ ಸ್ತರ; ಧರ್ಮಪಾಲನೆಯ ಬಾಹ್ಯಾಂಗ ಮತ್ತು ಅಂತರಂಗ ಇವುಗಳ ಪ್ರಮಾಣ ಮತ್ತು ಧರ್ಮದ ಪ್ರಕಟ ಮತ್ತು ಅಪ್ರಕಟ ಸಂವೇದನೆಗಳ ಪ್ರಮಾಣ** ೫೬

**೫. ಆಧ್ಯಾತ್ಮಿಕ ಮಟ್ಟಕ್ಕನುಸಾರ ಧರ್ಮದ ವಿಧಗಳು, ಧರ್ಮಪಾಲನೆಗೆ ಸಂಬಂಧಿಸಿದ ದೇಹಗಳು, ಧರ್ಮದ ವಿಧಗಳಿಗೆ ಸಂಬಂಧಿಸಿದ ಶಕ್ತಿಯ ಸ್ತರ ಮತ್ತು ಧರ್ಮಪಾಲನೆಯ ವಿಧಗಳು** ೫೭

**೬. ಧರ್ಮದ ವಿವಿಧ ಚರಣಗಳು ಮತ್ತು ಆಚಾರಧರ್ಮ** ೫೯

**೭. ಕೃತಧರ್ಮ ಮತ್ತು ಆಚಾರಧರ್ಮ** ೬೦

**೮. ವೈದಿಕ ಧರ್ಮ ಮತ್ತು ಆಚಾರಧರ್ಮ** ೬೧

**卐 ಕೆಲವು ಸಾಂದರ್ಭಿಕ ಅಂಶಗಳು** ೬೨

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೬೬

### ವಿಷಯಸೂಚಿಯಲ್ಲಿನ ಕ್ರಮಾಂಕ ೩

## ‘ಆಚಾರಧರ್ಮ’ ಗ್ರಂಥಮಾಲಿಕೆಯ ಮನೋಗತ

### ‘ಆಚಾರಧರ್ಮ’ವೆಂದರೆ ಜೀವನದ ಅಧ್ಯಾತ್ಮೀಕರಣ !

‘ಆಚಾರಧರ್ಮ’ವೆಂದರೆ ಯೋಗ್ಯ ಆಚಾರ-ವಿಚಾರಗಳ ಪಾಲನೆಯನ್ನು ಮಾಡುವುದು, ಕರ್ತವ್ಯಕರ್ಮಗಳು ಮತ್ತು ಧರ್ಮಾಚರಣೆಯ ಕೃತಿಗಳು, ಇಷ್ಟೇ ಹೆಚ್ಚಿನವರ ಕಣ್ಣೆದುರಿಗೆ ಬರುತ್ತವೆ. ಯಾರೂ ಆಚಾರಧರ್ಮದ ಬಗ್ಗೆ ಇಷ್ಟು ಸಂಕುಚಿತ ಅರ್ಥವನ್ನಿಟ್ಟುಕೊಳ್ಳಬಾರದು. ‘ಈಶ್ವರನ ಚರಣಗಳವರೆಗೆ ತಲುಪಲು ಸಹಾಯ ಮಾಡುವ ಜೀವನದಲ್ಲಿನ ಪ್ರತಿಯೊಂದು ಕೃತಿಯೆಂದರೆ ‘ಆಚರಣೆ’ ಮತ್ತು ಅವುಗಳನ್ನು ಕಲಿಸುವ ಧರ್ಮವೆಂದರೆ ‘ಆಚಾರಧರ್ಮ’ ಎಂಬ ವ್ಯಾಪಕ ಅರ್ಥದಲ್ಲಿ ಅದರ ವ್ಯಾಖ್ಯೆಯನ್ನು ಮಾಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ‘ಆಚಾರಧರ್ಮ’ವೆಂದರೆ ದೈನಂದಿನ ಜೀವನದಲ್ಲಿನ ಪ್ರತಿಯೊಂದು ವಿಷಯವನ್ನು ಅಧ್ಯಾತ್ಮೀಕರಣಗೊಳಿಸುವುದು; ಅಂದರೆ ಪ್ರತಿಯೊಂದು ವಿಷಯವನ್ನು ಸಾತ್ತ್ವಿಕ ಮತ್ತು ಚೈತನ್ಯಮಯಗೊಳಿಸುವುದು. ಆದುದರಿಂದಲೇ ಆಚಾರಧರ್ಮದ ಪಾಲನೆಯಿಂದ ಈಶ್ವರಪ್ರಾಪ್ತಿಯ ಕಡೆಗೆ ಬೇಗನೇ ಮಾರ್ಗಕ್ರಮಣವಾಗಲು ಸಹಾಯವಾಗುತ್ತದೆ. ಕಸ ತೆಗೆಯುವಾಗ ಒಳಗಿನಿಂದ ಹೊರಗಿನ ದಿಕ್ಕಿನತ್ತ ಅಂದರೆ ಬಾಗಿಲಿನ ಕಡೆಗೆ ತೆಗೆಯುವುದು, ಪುರುಷರು ಪ್ಯಾಂಟ್-ಶರ್ಟ್ ಧರಿಸುವ ಬದಲು ಜುಬ್ಬಾ-ಪೈಜಾಮವನ್ನು ಧರಿಸುವುದು ಮತ್ತು ಸ್ತ್ರೀಯರು ಸಲ್ವಾರ್-ಕುರ್ತಾದ ಬದಲು ಸೀರೆಯನ್ನುಟ್ಟುಕೊಳ್ಳುವುದು, ಸ್ತ್ರೀಯರು ಕೂದಲನ್ನು ಬಾಚುವಾಗ ಜಡೆ ಅಥವಾ ತುರುಬು ಹಾಕಿಕೊಳ್ಳುವುದು, ಇಂತಹ ಅನೇಕ ವಿಷಯಗಳು ಆಚಾರಧರ್ಮದಲ್ಲಿ ಬರುತ್ತವೆ.’

### ‘ಆಚಾರಧರ್ಮ’ವು ಧರ್ಮ ಮತ್ತು ಸಾಧನೆಯ ಅಡಿಪಾಯವಾಗಿದೆ !

‘ಆಚಾರಃ ಪ್ರಭವೋ ಧರ್ಮಃ’ ಅಂದರೆ ‘ಧರ್ಮವು ಆಚಾರದಿಂದ ಉತ್ಪನ್ನವಾಗಿದೆ’. ನಮ್ಮ ಧಾರ್ಮಿಕ ಜೀವನದ ನಿರ್ಮಿತಿಯು (ರಚನೆಯು) ಆಚಾರಧರ್ಮದ ಮೇಲೆ ಅವಲಂಬಿಸಿರುತ್ತದೆ. ಧರ್ಮಾಚರಣೆಯ, ಸಾಧನೆಯ ಉದ್ದೇಶವು ‘ಈಶ್ವರಪ್ರಾಪ್ತಿ’ ಯಾಗಿರುತ್ತದೆ. ಧರ್ಮಾಚರಣೆಯನ್ನು, ಸಾಧನೆಯನ್ನು ಮಾಡುವ ಮನಸ್ಸಿನ ಪ್ರವೃತ್ತಿಯು ಸತ್ತ್ವಗುಣದ ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯ ಜನರು ರಜೋಗುಣಿ-ತಮೋಗುಣಿಯಾಗಿರುವುದರಿಂದ ಅವರು ಕೂಡಲೇ ಸಾಧನೆಯ ಕಡೆಗೆ ಹೊರಳುವುದಿಲ್ಲ. ಆಚಾರಧರ್ಮದ ಪಾಲನೆಯಿಂದ ಜನರ ಸಾತ್ತ್ವಿಕತೆಯು ನಿಧಾನವಾಗಿ ಹೆಚ್ಚಾಗತೊಡಗಿದಂತೆ ಮುಂದೆ ಅವರು ಸಾಧನೆಯ ಕಡೆಗೆ ಹೊರಳುತ್ತಾರೆ.

ಅಲ್ಲದೇ ಆಚಾರಧರ್ಮದ ಪಾಲನೆಯನ್ನು ದಿನದ ೨೪ ಗಂಟೆ ಮಾಡಬೇಕಾಗುವುದ ರಿಂದ ಮುಂದೆ ದಿನವಿಡೀ ಸಾಧನೆಯನ್ನು ಮಾಡುವ ಅಡಿಪಾಯವೂ ನಿರ್ಮಾಣ ಆಗುತ್ತದೆ. ಉನ್ನತ ಸಾಧಕರ ಮತ್ತು ಸಂತರ ಸಾಧನೆಯು ಅಂತರ್ಮನದಲ್ಲಿ ಸತತವಾಗಿ ನಡೆಯುತ್ತಿರುವುದರಿಂದ ಅವರು ಪ್ರತಿನಿತ್ಯ ಅಧ್ಯಾತ್ಮಿಕ ಜೀವನವನ್ನೇ ಜೀವಿಸುತ್ತಿರುತ್ತಾರೆ. ಆದುದರಿಂದ ಅವರಿಗೆ ಮಾನಸಿಕ ಮತ್ತು ಬೌದ್ಧಿಕ ಸ್ತರದಲ್ಲಿನ ಆಚಾರ ಧರ್ಮದ ಪಾಲನೆಯ ಅವಶ್ಯಕತೆಯಿರುವುದಿಲ್ಲ. ಅವರು ಆಚಾರಧರ್ಮದ ಆಚೆಗೆ ಹೋಗಿರುತ್ತಾರೆ.

## ಆಚಾರಧರ್ಮದಿಂದ ವ್ಯಾವಹಾರಿಕ ಮತ್ತು ರಾಷ್ಟ್ರೀಯ ಜೀವನದ ಉತ್ಕರ್ಷವೂ ಆಗುತ್ತದೆ !

ಆಚಾರಗಳ ಪಾಲನೆಯಿಂದ ಕೇವಲ ಆಧ್ಯಾತ್ಮಿಕ ಲಾಭವಷ್ಟೇ ಆಗುತ್ತದೆ ಎಂದೇನಿಲ್ಲ, ಅದರೊಂದಿಗೆ ವ್ಯಕ್ತಿಯ ವ್ಯಾವಹಾರಿಕ ಜೀವನದ ಉತ್ಕರ್ಷವೂ ಆಗುತ್ತದೆ. ಉದಾ. 'ಸತ್ಯದಿಂದ ನಡೆದುಕೊಳ್ಳಬೇಕು' ಎಂಬ ಆಚಾರದ ಪಾಲನೆಯಿಂದ ವ್ಯಕ್ತಿಗೆ ಸುಳ್ಳು ಮಾತನಾಡಿದ ಪಾಪವು ತಗಲುವುದಿಲ್ಲ, ಮಾತ್ರವಲ್ಲದೇ ಅವನಲ್ಲಿ ನೈತಿಕತೆ ಮತ್ತು ಸುಸಂಸ್ಕೃತತೆ ಎಂಬ ಗುಣಗಳ ವಿಕಾಸವೂ ಆಗುತ್ತದೆ. ಆಚಾರಗಳ ಪಾಲನೆಯಿಂದ ವ್ಯಕ್ತಿಗೆ ಒಂದು ರೀತಿಯ ಶಿಸ್ತು ಬರುತ್ತದೆ. ಶಿಸ್ತುಬದ್ಧತೆಯು ಆದರ್ಶ ಜೀವನಪದ್ಧತಿಯ ಒಂದು ಮಹತ್ವದ ಗುಣವಾಗಿದೆ.

ಆಚಾರವು ಹಿಂದೂಗಳ ಶ್ರದ್ಧೆಯ ಮತ್ತು ಸಂಸ್ಕೃತಿಯ ನಿಯಮವಾಗಿದೆ. ವಿವಿಧ ಉಪಾಸನಾಪಂಥ ಮತ್ತು ಸಂಪ್ರದಾಯಗಳಲ್ಲಿನ ಹಿಂದೂಗಳ ಧರ್ಮಾ ಚರಣೆಯ ಪದ್ಧತಿಗಳು ವಿಭಿನ್ನವಾಗಿದ್ದರೂ, ಸದಾಚಾರ ಅಥವಾ ಶಿಷ್ಟಾಚಾರ ಇವು ಧರ್ಮದ ಒಂದು ಪ್ರಮಾಣವೆಂದು ಪರಿಗಣಿಸಲ್ಪಟ್ಟಿರುವುದರಿಂದ ಧರ್ಮದ ಈ ಸಮಾನ ನಿಯಮದಿಂದ ಹಿಂದೂಗಳು ಪರಸ್ಪರ ಬಂಧಿಸಲ್ಪಟ್ಟಿದ್ದಾರೆ. ಹಿಂದೂಗಳ ಧಾರ್ಮಿಕ ಒಗ್ಗಟ್ಟಿನ ಮೇಲೆ ಹಿಂದೂಗಳ ಐಕ್ಯವು ಅವಲಂಬಿಸಿಕೊಂಡಿದೆ. ಐಕ್ಯದ ಮೇಲೆ ಸಮಾಜದ ಉನ್ನತಿ ಮತ್ತು ಪರ್ಯಾಯವಾಗಿ ರಾಷ್ಟ್ರದ ಉತ್ಕರ್ಷವೂ ಅವಲಂಬಿಸಿಕೊಂಡಿದೆ.

## 'ಆಚಾರಧರ್ಮ' ಗ್ರಂಥಮಾಲಿಕೆ ಎಂದರೆ ಆಚಾರಗಳ ಹಿಂದಿನ ದಿವ್ಯ ಅಧ್ಯಾತ್ಮಶಾಸ್ತ್ರವನ್ನು ಹೇಳುವಂತಹ ಜ್ಞಾನಾಮೃತ !

'ಆಚಾರಧರ್ಮ' ಗ್ರಂಥಮಾಲಿಕೆಯಲ್ಲಿ ವಿಷಯಗಳಿಗನುಸಾರ ವಿವಿಧ ಖಂಡ (ಅಧ್ಯಾಯ) ಗಳಲ್ಲಿ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವ ತನಕ ಮಾಡಬೇಕಾದ

卐 卐

ಕೃತಿಗಳ ವಿಷಯದಲ್ಲಿನ ಜ್ಞಾನವನ್ನು ನೀಡಲಾಗಿದೆ. ಇದರೊಂದಿಗೆ ಹೆಚ್ಚಿನ ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರವನ್ನೂ ನೀಡಲಾಗಿದೆ. ಈ ಅಧ್ಯಾತ್ಮಶಾಸ್ತ್ರವೆಂದರೆ ಸನಾತನದ ಸಾಧಕರಿಗೆ ಈಶ್ವರನ ಕೃಪೆಯಿಂದ ದೊರಕಿದ ಮತ್ತು ಭೂತಲದಲ್ಲಿ ಎಲ್ಲಿಯೂ ಉಪಲಬ್ಧವಿಲ್ಲದಿರುವ ಅಮೂಲ್ಯ ಜ್ಞಾನಾಮೃತವಾಗಿದೆ.

卐 卐

## ಡಾ. ಜಯಂತ ಆಠವಲೆಯವರ ಹೆಸರಿಗೆ ಸೇರಿಸುವ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

'೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆ ಯವರನ್ನು 'ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ' ಎಂದು ಸಂಬೋಧಿಸಲಾಗುತ್ತಿದೆ. 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನಿಂದ ಸಂಬೋಧಿಸುವುದರಿಂದ 'ಪರಾತ್ಪರ ಗುರು ಡಾ. ಆಠವಲೆಯವರಲ್ಲಿರುವ ಈಶ್ವರೀ ತತ್ತ್ವದಿಂದ ಎಲ್ಲರಿಗೂ ಲಾಭವಾಗಬೇಕು' ಎಂಬುದು ಸಪ್ತರ್ಷಿಗಳ ಆಜ್ಞೆಯ ಉದ್ದೇಶವಾಗಿದೆ. (೧೩.೭.೨೦೨೨ ಕ್ಕೂ ಮೊದಲು ಸನಾತನದ ಗ್ರಂಥಗಳಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರನ್ನು 'ಪ.ಪೂ. [ಪರಮ ಪೂಜ್ಯ]' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ.)

**– (ಪೂ.) ಶ್ರೀ. ಸಂದೀಪ ಆಳಶಿ, ಸನಾತನ ಆಶ್ರಮ, ಗೋವಾ (೨೪.೭.೨೦೨೨)**

## ಸನಾತನದ ಚೈತನ್ಯಮಯ ಗ್ರಂಥಸಂಪತ್ತಿನ ಮುಖ್ಯ ವೈಶಿಷ್ಟ್ಯಗಳು !

- 卐 ಶೀಘ್ರ ಈಶ್ವರಪ್ರಾಪ್ತಿಗಾಗಿ ಆವಶ್ಯಕವಾಗಿರುವ ಯೋಗ್ಯ ಸಾಧನೆಯ ಬೋಧನೆ !
- 卐 ಸಾಧನೆಯಲ್ಲಿನ ಅಡಚಣೆ ದೂರಗೊಳಿಸಿ ಸಾಧನೆಗೆ ದಿಶೆ ನೀಡುವ ಮಾರ್ಗದರ್ಶನ !
- 卐 ಅಧ್ಯಾತ್ಮವನ್ನು ವಿವರಿಸಲು ವಿವಿಧ ಸಾಧನಾಮಾರ್ಗಗಳ ತುಲನಾತ್ಮಕ ವಿವೇಚನೆ !
- 卐 ಈಶ್ವರನ ಕೃಪೆ ಮತ್ತು ಅನೇಕ ವರ್ಷಗಳ ಸಾಧನೆಯಿಂದ ಸನಾತನದ ಕೆಲವು ಸಾಧಕರ ಅಧ್ಯಾತ್ಮ ಪ್ರತಿಭೆಯು ಜಾಗೃತವಾಗಿದೆ, ಇದರಿಂದ ಕೆಲವು ಸಾಧಕರಿಗೆ ಸೂಕ್ಷ್ಮದಿಂದ ದೊರಕುತ್ತಿರುವ ಜ್ಞಾನದ ಸೇರ್ಪಡೆ !